■ ಹನಿ

## 'ಟಾಟಾ' ನಾಯಕ ಮಿಸ್ತ್ರಿ

ಟಾಟಾ ಸನ್ಸ್ ಭಾರತದ ಅತ್ಯಂತ ಪ್ರತಿಷ್ಠಿತ ಉದ್ಯಮ ಗುಂಪು. ರತನ್ ಟಾಟಾ ನಿವೃತ್ತಿಯ ಬಳಿಕ ಇದೀಗ ಈ ಉದ್ಯಮ ಗುಂಪಿನ ಚೇರ್‌ಮನ್ ಆಗಿ ಸೈರಸ್ ಪಲ್ಲೂನ್‌ಜಿ ಮಿಸ್ತ್ರಿ ಅಧಿಕಾರ ವಹಿಸಿಕೊಂಡಿದ್ದಾರೆ. ರತನ್ ಟಾಟಾ ಉತ್ತರಾಧಿಕಾರಿಯಾಗುವ ಮಹತ್ತರ ಜವಾಬ್ದಾರಿಯನ್ನು ಕುಟುಂಬದ ಹೊರಗಿನ ಸೈರಸ್ ಮಿಸ್ತ್ರಿ ಅವರಿಗೆ ನೀಡುವ ಮೂಲಕ ಅವಿವಾಹಿತ ರತನ್ ಟಾಟಾರವರು, ಉದ್ಯಮರಂಗಕ್ಕೆ ಹೊಸ ಮೇಲ್ಪಂಕ್ತಿಯೊಂದನ್ನು ಹಾಕಿಕೊಟ್ಟಿದ್ದಾರೆ. ಈ ಹಿಂದೆಯೂ ಒಮ್ಮೆ ಟಾಟಾ ಉದ್ಯಮ ಗುಂಪಿಗೆ ಸರ್ ನವರೋಜಿ ಸಕರತ್‌ವಾಲಾ ಎಂಬ, ಟಾಟಾ ಕುಟುಂಬಕ್ಕೆ ಸೇರದ ಭಾರತೀಯ ಉದ್ಯಮಿಯೊಬ್ಬರು ಚೇರ್‌ಮನ್ ಆಗಿದ್ದುಂಟು. ಆದರೆ ಈ ಸಲ ಭಾರತೀಯರಲ್ಲದ, ಐರಿಶ್ ಪ್ರಜೆಯೊಬ್ಬರಿಗೆ ಈ ಜವಾಬ್ದಾರಿ ವರ್ಗಾವಣೆಯಾಗಿದೆ.

ಸೈರಸ್ ಮಿಸ್ತ್ರಿ (ಬರ್ತ್‌ಡೇ 4-7-1968)ಯ ತಂದೆ ಬೃಹತ್ ಐರಿಶ್ ನಿರ್ಮಾಣ ಸಂಸ್ಥೆ 'ಶಪೂರ್ ಜಿ ಪಲ್ಲೋನ್‌ಜಿ ಅಂಡ್ ಕೋ' ಒಡೆಯ. 15 ಸಾವಿರ ಕೋಟಿ ರೂಪಾಯಿ ಮೌಲ್ಯದ ಈ ಉದ್ಯಮಕ್ಕೆ ಸೈರಸ್ ಅವರೇ ಸದ್ಯದ ಮುಖ್ಯಸ್ಥರು. ಅದರ ಜತೆಗೆ ಫೋರ್ಬ್ಸ್ ಗೋಕಾಕ್, ಅಸ್ಟನ್ಸ್ ಇನ್‌ಫ್ರಾಸ್ಟ್ರಕ್ಚರ್, ಯುನೈಟೆಡ್ ಮೋಟರ್ಸ್ ಇಂಡಿಯಾ ಮುಂತಾಗಿ ಹಲವಾರು ಕಂಪೆನಿಗಳ ನಿರ್ದೇಶಕರಾಗಿಯೂ ಕೆಲಸ ಮಾಡುತ್ತಿದ್ದಾರೆ. ಈಗ ಟಾಟಾ ಸನ್ಸ್ ಚೇರ್‌ಮನ್ ಆಗುವ ಮೂಲಕ ಭಾರತೀಯ ಮೂಲದವರಲ್ಲದ ವ್ಯಕ್ತಿಯೊಬ್ಬರು ಈ ಹುದ್ದೆ ಪಡೆದ ಮೊದಲಿಗರಾಗಿದ್ದಾರೆ. ಪಾರ್ಸಿ ಜನಾಂಗಕ್ಕೆ ಸೇರಿದ ಸೈರಸ್ ಮಿಸ್ತ್ರಿ ಈಗಾಗಲೆ ತನ್ನ ವೃತ್ತಿ ಸಂಬಂಧಿ ನಡೆಗಳ ಮೂಲಕ ಯಶಸ್ವಿ ಆಡಳಿತಗಾರ ಎನ್ನಿಸಿಕೊಂಡವರು. ಜಗತ್ತಿನ 11ನೇ ಅತ್ಯಂತ ಪ್ರತಿಷ್ಠಿತ ಕಂಪೆನಿಯಾಗಿರುವ, ನೂರಕ್ಕೂ ಹೆಚ್ಚು ಸ್ವತಂತ್ರ ಕಂಪೆನಿಗಳ ಗುಂಪಾಗಿರುವ ಟಾಟಾ ಸನ್ಸ್‌ನ ದೊಡ್ಡ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸುವ ಭರವಸೆಯನ್ನಂತೂ ಸೈರಸ್ ಮಿಸ್ತ್ರಿ ಈಗಾಗಲೆ ಮೂಡಿಸಿದ್ದಾರೆ.

ಲಂಡನ್ ಇಂಪೀರಿಯಲ್ ಕಾಲೇಜಿನಲ್ಲಿ ಪದವಿ ಓದಿ, ಲಂಡನ್ ಬಿಸಿನೆಸ್ ಸ್ಕೂಲ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಮಿಸ್ತ್ರಿ ತಾರುಣ್ಯದಲ್ಲೇ ಪ್ರತಿಭೆ ಮೆರೆದವರು. ಅವರ ಅಜ್ಜನ ಕಂಪೆನಿ ಮುಂಬೈಯ ಕೇಂದ್ರ ರೈಲು ನಿಲ್ದಾಣ, ರಿಸರ್ವ್ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಕೇಂದ್ರ ಕಚೇರಿ ಸಹಿತ ಹಲವು ಕಟ್ಟಡಗಳನ್ನು ನಿರ್ಮಾಣ ಮಾಡಿ ಹೆಸರುವಾಸಿಯಾಗಿದೆ.

1930ರಲ್ಲಿ ಸೈರಸ್ ಅವರ ಅಜ್ಜ ಟಾಟಾ ಸನ್ಸ್‌ನ ಷೇರು ಖರೀದಿ ಮಾಡಿದ್ದರು. ಅದು ಅಪ್ಪನ ಮೂಲಕ ಈಗ ಮಗನ ಕೈಗೆ ಬಂದಿದೆ. ಸದ್ಯಕ್ಕೆ ಟಾಟಾ ಸನ್ಸ್‌ನ ಒಟ್ಟು ಶೇ. 18.5ರಷ್ಟು ಷೇರುಗಳು ಇವರ ಬಳಿ ಇವೆ. ಟ್ರಸ್ಟ್‌ಗಳನ್ನು ಹೊರತು ಪಡಿಸಿದರೆ ವ್ಯಕ್ತಿಗತವಾಗಿ ಟಾಟಾ ಉದ್ಯಮ ಗುಂಪಿನ ಅತ್ಯಧಿಕ ಷೇರುಗಳನ್ನು ಹೊಂದಿರುವ ಹೆಮ್ಮೆಯೂ ಇವರದ್ದು. ಸೈರಸ್‌ರ ಇಬ್ಬರು ತಂಗಿಯರಲ್ಲಿ ಒಬ್ಬಳಾದ ಆಲೂ, ರತನ್ ಟಾಟಾರ ಮಲಸೋದರ ನೋಯೆಲ್ ಟಾಟಾರನ್ನು ಮದುವೆ ಆಗಿರುವುದರಿಂದ ಈ ಅಧಿಕಾರ ಹಸ್ತಾಂತರ ಕುಟುಂಬದ ವ್ಯಾಪ್ತಿಯಲ್ಲೇ ನಡೆದಿದೆ ಎನ್ನಲೂಬಹುದು.






## ಗೋಲುಗಳ ಸರದಾರ

ಲಯನಲ್ ಆ್ಯಂಡ್ರೂಸ್ 'ಲಿಯೊ' ಮೆಸ್ಸಿ, ಈಗ ಫುಟ್‌ಬಾಲ್ ಜಗತ್ತಿನ 'ನಂಬರ್ ಒನ್' ಆಟಗಾರ. 2012ರಲ್ಲಿ ಕ್ಲಬ್ ಮತ್ತು ದೇಶದ ಪರವಾಗಿ ಆಡಿದ ಪಂದ್ಯಗಳಲ್ಲಿ ಒಟ್ಟು 85 ಗೋಲುಗಳನ್ನು ಹೊಡಿದಿರುವ ಮೆಸ್ಸಿ ಹೊಸ ವಿಶ್ವದಾಖಲೆಯನ್ನು ನಿರ್ಮಿಸಿದ್ದಾನೆ. ಈ ಹಿಂದೆ 1972ರಲ್ಲಿ ಜರ್ಮನಿಯ ಮುಲ್ಲರ್ ಒಂದು ವರ್ಷದಲ್ಲಿ 84 ಗೋಲುಗಳನ್ನು ಹೊಡೆದು ಸ್ಥಾಪಿಸಿದ್ದ ದಾಖಲೆಯನ್ನು ಮೆಸ್ಸಿ ಮುರಿದು ಹಾಕಿದ್ದಾನೆ.

ಬಾರ್ಸೆಲೊನಾ ಎಫ್‌ಸಿ ತಂಡದ ಈ ಅದ್ವಿತೀಯ ಆಟಗಾರ, ಅರ್ಜಂಟೀನಾ ತಂಡದ ಪ್ರಮುಖ ಫಾರ್ವರ್ಡ್. ಈತ ತಂಡದಲ್ಲಿ ಇದ್ದಾನೆಂದರೆ ಎದುರಾಳಿಗಳಿಗೆ ನಡುಕ ಹೆಚ್ಚು. ಈತನ ದಾಳಿಯನ್ನು ಎದುರಿಸಲೆಂದೇ 3-4 ಆಟಗಾರರಿಗೆ ಪ್ರತ್ಯೇಕ ಸೂಚನೆ ಕೊಡಬೇಕು ಎನ್ನುವಂತೆ ಇರುತ್ತದೆ ಈತನ ದಾಳಿಯ ವೇಗ. 21ರ ಹರೆಯದಲ್ಲೇ ಫಿಫಾ ವಿಶ್ವ ಆಟಗಾರ ಪ್ರಶಸ್ತಿಗೆ ನಾಮಕರಣಗೊಂಡಿದ್ದ ಮೆಸ್ಸಿ, ಮರುವರ್ಷವೇ ಅದನ್ನು ಗೆದ್ದುಕೊಂಡ. ಈಗಾಗಲೆ ಮೂರು ಫಿಫಾ ವರ್ಷದ ಆಟಗಾರ ಪ್ರಶಸ್ತಿ ಗೆದ್ದಿರುವ ಮೆಸ್ಸಿ, ಈ ವರ್ಷವೂ ಅದನ್ನು ಗೆಲ್ಲುವುದು ಖಚಿತ. ವರ್ಷದ ಕೊನೆಯಲ್ಲಿ ಇನ್ನೂ ಎರಡು ಪಂದ್ಯಗಳನ್ನು ಆಡಬೇಕಿರುವ ಮೆಸ್ಸಿ, ವರ್ಷದ ಅತ್ಯಧಿಕ ಗೋಲುಗಳ ದಾಖಲೆಯನ್ನು ಇನ್ನಷ್ಟು ಸುಧಾರಿಸುವುದು ಖಚಿತ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65